

# ಚಂದ್ರಯಾನ

■ ರವೀಂದ್ರ ಬಂದಗದ್ದೆ
ಕಲೆ: ಸಂತೋಷ್ ಸಸಿಹಿತ್ಲು

ಇರುಳಿನ ಸೊಬಗಿಗೆ ಮೆರಗನು ನೀಡಲಿ
ಚಂದಿರ ಮೂಡುತ ಬಾನಿನಲಿ
ಮೂಡುವ ಚಂದಿರ ಸುಂದರ ಕಾಣಲಿ
ಮಿನುಗುವ ತಾರೆಯ ತೋಟದಲಿ

ದಿನ ದಿನ ಮೂಡುವ ಚಂದಿರನು
ನಭದಲಿ ಬೆಳೆಯುತ ತೇಲುವನು
ಅನುದಿನ ಕಾಣುವ ಚಂದ್ರನ ನಗುವನು
ನೋಡುತ ನಾ ಮೈ ಮರೆಯುವೆನು

ಅರಳಿವೆ ರಾತ್ರಿಯ ರಾಣಿಯು ನೋಡ
ಕಂಪನು ಹರಡುತ ಗಾಳಿಯಲಿ
ತನುವನು ಮನವನು ಕುಲುಕಿದೆ ನೋಡ
ಚಂದ್ರನ ನಗುವಿನಾ... ಮೋಡಿಯಲಿ

ಬಾನಂಗಳದಲಿ ಮೂಡುವ ಚಂದ್ರನು
ವಸುಧೆಗೆ ಹೊಸತನ ನೀಡುವನು
ಹಸಿರಂಗಣದಿ ನೋಡುತ ಅವನನು
ಕ್ಷಣ ಕ್ಷಣ ಚೇತನ ಪಡೆಯುವೆನು

ಮೆಲ್ಲನೆ ಮಲ್ಲನೆ ಮೋಡಕೆ ತಗಲುತ
ಸಾಗುವ ಚಂದಿರ ಬಲುದೂರ
ನೋಡುತ ಚೆಲುವನು ಮನದಿ ಮೆಲಕುತ
ಮಾಡುವೆ ನಮನವ ಮನಸಾರ ■



## ಕುಂಚ ಪ್ರಪಂಚ



**ಸ್ವಸ್ತಿ ಪ್ರವಲ್ಲಿಕಾ**
5ನೇ ತರಗತಿ,
ವಿದ್ಯೋದಯ ಇಂಗ್ಲಿಷ್ ಸ್ಕೂಲ್, ವೇಣೂರು







**ನಕ್ಷ ಸಿ.**
4ನೇ ತರಗತಿ, ನ್ಯಾಷನಲ್ ಪಬ್ಲಿಕ್ ಸ್ಕೂಲ್, ಯಲಹಂಕ